ಪಿ.ಸಿ.ಆರ್.ನಂ.203/2026

ದಿನಾಂಕಃ 02-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಿರ್ಯಾದಿಯ ಸತ್ಯ ಪ್ರತಿಜ್ಞೆಯ ಹೇಳಿಕೆಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳನ್ನು ನಾನೇ ಹೇಳಿ ಬರೆಸಿದ್ದು ಅವುಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ರುಜುವನ್ನು ಹಾಕಿದ್ದೇನೆ.

ಆರೋಪಿ ನನಗೆ ಗೊತ್ತು. ಆರೋಪಿ ನನ್ನ ಹೆಸರಿನಲ್ಲಿ ಬರೆದುಕೊಟ್ಟಿರುವಂತಹ ಚೆಕ್ ನಿಪಿ-1 ಮತ್ತು ಆರೋಪಿ ಸಹಿ ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ಬ್ಯಾಂಕಿನವರು ನೀಡಿರುವಂತಹ ಹಿಂಬರಹ ನಿಪಿ-2 ಎಂದು ಗುರುತಿಸಲಾಯಿತು. ನಾನು ನನ್ನ ವಕೀಲರ ಮುಖಾಂತರ ಆರೋಪಿ ಹೇಳಿರುವಂತಹ ನೋಟೀಸಿನ ಕಚೇರಿ ಪ್ರತಿ ನಿಪಿ-3 ಮತ್ತು ಅಂಚೆ ರಸೀದಿ ನಿಪಿ-4 ಎಂದು, ನೋಟೀಸ್ ಜಾರಿಯಾದ ಬಗ್ಗೆ ಅಂಚೆ ಇಲಾಖೆಯವರು ಸಂಬಂಧಿಸಿದ ಟ್ರ್ಯಾಕ್ ಕನ್ ಸೈನ್ ಮೆಂಟ್ ನಿಪಿ-5 ಎಂದು ಗುರುತಿಸಲಾಯಿತು. ಆದ್ದರಿಂದ ಆರೋಪಿ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿಕೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ಜಯಲಕ್ಷ್ಮೀ ಎನ್.ಬಿ.)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್